**ದಿ.29.01.2026 ರಂದುಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ. ಡಿ.ಆರ್. ಆರೋಪಿ ಪರ ವಕೀಲರಿಂದಃ**

ನಾನು ಸದರಿ ನಿವೇಶನವನ್ನು ಭೂ ಮಾಲೀಕರಿಂದ ಖರೀದಿ ಮಾಡಿ ನೇರವಾಗಿ ನನ್ನ ಹೆಂಡತಿಯ ಹೆಸರಿಗೆ ನೊಂದಾಯಿಸಿರುತ್ತೇನೆ. ಆದರೆ ಹಣವನ್ನು ನಾನು ಪಾವತಿ ಮಾಡಿರುತ್ತೇನೆ. ಸದರಿ ಆಸ್ತಿಗೆ ನಾನು ಹಣವನ್ನು ಸಂದಾಯ ಮಾಡಿದ್ದೇನೆ ಎಂದು ನನ್ನ ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ನಾನು ಕಟ್ಟಡವನ್ನು ನಿರ್ಮಾಣ ಮಾಡಿ ಅದನ್ನು ಮಾರಾಟ ಮಾಡುವಾಗ ಎಲ್ಲಾ ದಾಖಲೆಗಳನ್ನು ಮತ್ತು ಅದರಲ್ಲಿ ಬರೆದಿರುವುದನ್ನು ಓದಿ ತಿಳಿದುಕೊಂಡು ನಂತರ ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಆಸ್ತಿಯ ಮೌಲ್ಯ ರೂ.25ಲಕ್ಷ ಎಂದು ನಮೂದು ಮಾಡಿದ್ದು, ಆದರೆ ನನ್ನ ಕ್ರಯ ಪತ್ರದಲ್ಲಿ ರೂ.13,50,000/- ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಅದೇ ರೀತಿ ಕ್ರಯ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ ಮತ್ತು ಸದರಿ ಕ್ರಯ ಪತ್ರದಲ್ಲಿ ನನಗೆ ಹಣವೂ ಪೂರ್ಣ ಸಂದಾಯವಾಗಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಸರಿ. ಈ ವಿಚಾರವನ್ನು ನಾನು ನನ್ನ ದೂರಿನಲ್ಲಿ ಬರೆದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**